# ‘ಆಯುರ್ವೇದ ಚಿಕಿತ್ಸೆಗೆ ವಿಮೆ’

ಬೆಂಗಳೂರು, ಮಾ.10- ಸಾರ್ವಜನಿಕರ ಆರೋಗ್ಯ ರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸಿರುವ ಆಯುರ್ವೇದ ಚಿಕಿತ್ಸೆಗೆ ವಿಮಾ ಸೌಲಭ್ಯ ನೀಡಬೇಕು ಎಂದು ಅರ್ಥ್ ಆಯುರ್ವೇದ ಆರೋಗ್ಯ ಕೇಂದ್ರದ ವೈದ್ಯಕೀಯ ನಿರ್ದೇಶಕ ಡಾ. ಪ್ರಶಾಂತ್ ಎಸ್. ಆಚಾರ್ಯ ಒತ್ತಾಯಿಸಿದ್ದಾರೆ.

ಶಸ್ತ್ರಚಿಕಿತ್ಸೆ ಇಲ್ಲದೆ ಜನರ ರೋಗ ರುಜಿನಗಳನ್ನು ನಿವಾರಿಸುತ್ತಿರುವ ಆಯುರ್ವೇದ ಚಿಕಿತ್ಸೆಗೆ ವಿಮಾ ಸಂಸ್ಥೆಗಳು ‘ಚಿಕಿತ್ಸೆ ಮರುಪಾವತಿ’ ಸೌಲಭ್ಯ ನೀಡುತ್ತಿಲ್ಲ. ಬೇರೆ ಯಾವುದೇ ರೀತಿಯ ಚಿಕಿತ್ಸೆಗಳಿಗೆ ಮರುಪಾವತಿ ಸೌಲಭ್ಯ ವಿದೆ. ಆಯುರ್ವೇದದ ಚಿಕಿತ್ಸೆಗಳಿಗೂ ಈ ಯೋಜನೆ ಅನ್ವಯವಾಗಬೇಕು ಎಂದರು.

ಆಫ್ರಿಕಾ, ರಷ್ಯಾಗಳಲ್ಲಿ ಆಯುರ್ವೇದ ಚಿಕಿತ್ಸೆಗಳಿಗೆ ವಿಮಾ ಸಂಸ್ಥೆಗಳು ಮರುಪಾವತಿ ಸೌಲಭ್ಯವನ್ನು ಈಗಾಗಲೇ ನೀಡುತ್ತಿವೆ. ನಮ್ಮ ಪಾರಂಪರಿಕ ಔಷಧ ಪದ್ಧತಿಯಾದ ಆಯುರ್ವೇದಕ್ಕೆ ನಮ್ಮಲ್ಲೇ ಪ್ರಾಮುಖ್ಯ ಇಲ್ಲ ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ಗುರುವಾರ ವಿಷಾದಿಸಿದರು.

ಔಷಧ ಗುಣಗಳನ್ನು ಹೊಂದಿರುವ ಹರ್ಬಲ್ ಗಿಡಗಳಿಗೆ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅಪಾರ ಬೇಡಿಕೆ ಇದೆ. ಈಗ 16ರಿಂದ 20 ಬಿಲಿಯನ್ ಡಾಲರ್ ಮಾರುಕಟ್ಟೆ ಇದ್ದು, ಮುಂದಿನ ದಿನಗಳಲ್ಲಿ ಈ ಪ್ರಮಾಣ 80 ಬಿಲಿಯನ್ ಡಾಲರ್‌ಗೆ ಮುಟ್ಟಲಿದೆ. ಈ ನಿಟ್ಟಿನಲ್ಲಿ ಅರ್ಥ್ ಸಂಸ್ಥೆ ರೈತರಿಗಾಗಿ ವಿನೂತನ ಯೋಜನೆಯನ್ನು ಹಮ್ಮಿಕೊಂಡಿದೆ. ಈ ಯೋಜನೆಯಡಿ ರೈತರು ಬೆಳೆಯಬೇಕಾದ ಸಸಿಗಳ ಬಗ್ಗೆ ಮಾಹಿತಿ ಒದಗಿಸಲಾಗುತ್ತದೆ ಎಂದರು.

200 ಹಾಸಿಗೆಗಳ ದತ್ತಿ ಆಸ್ಪತ್ರೆಯನ್ನು ದೊಡ್ಡಬಳ್ಳಾಪುರದ ಬಳಿ ಇನ್ನೈದು ತಿಂಗಳಲ್ಲಿ ಸಂಸ್ಥೆ ನಿರ್ಮಿಸಲಿದೆ. ಆರ್ಥಿಕವಾಗಿ ಹಿಂದುಳಿದವರಿಗೆ ಇಲ್ಲಿ ಚಿಕಿತ್ಸೆ ನೀಡಲಾಗುವುದು ಎಂದು ಅವರು ವಿವರಿಸಿದರು. ದೂ: 25288630.